# ಹಿಂದೂಸ್ತಾನಿ ಸಂಗೀತ ಸಂಪದ –೧

## ಪ್ರಥಮ ಪಿ.ಯು.ಸಿ. ಪಠ್ಯಪುಸ್ತಕ

**2015 - 2016**


**ಪದವಿ ಪೂರ್ವ ಶಿಕ್ಷಣ ಇಲಾಖೆ**

**ಮಲ್ಲೇಶ್ವರಂ, ಬೆಂಗಳೂರು.**

www.pue.kar.nic.in

*© Department of Pre-University Education* 2014-2015.

***Revised Edition - 2017***

**All Rights Are Reserved**

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

This book is sold subject to the condition that it shall not, by way of trade, be lent, resold, hired out or otherwise disposed of without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

*Printed on 80 GSM Maplitho paper*

## ನಿರ್ದೇಶಕರ ಸಂದೇಶ

**ಆತ್ಮೀಯ ವಿದ್ಯಾರ್ಥಿಗಳೇ,**

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗುಮವಾಗಿ ಸಾಗಿ, ನೀವು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,

**ಸಹಿ/-**
**ಸಿ.ಶಿಖಾ,** ಭಾ.ಆ.ಸೇ.,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

## ಸಂಪಾದಕರ ಮಾತು

ಪದವಿಪೂರ್ವ ಶಿಕ್ಷಣ ಇಲಾಖೆಯು ಪಿ.ಯು.ಸಿ ಹಂತದಲ್ಲಿ ಹಿಂದೂಸ್ತಾನಿ ಸಂಗೀತ ವಿಷಯವನ್ನು ಆಯ್ಕೆ ಮಾಡಿಕೊಂಡು ಅಭ್ಯಾಸಗೈಯುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪಠ್ಯಪುಸ್ತಕವನ್ನು ರಚಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರುವುದು ಸ್ತುತ್ಯಾರ್ಹವಾಗಿದೆ. ಪದವಿಪೂರ್ವ ಶಿಕ್ಷಣದಲ್ಲಿ ಸಂಗೀತ ವಿಷಯವು ಬಹುವರ್ಷಗಳಿಂದ ಅಡಕವಾಗಿದ್ದರೂ ಸಮಗ್ರವಾದ ಪಠ್ಯಪುಸ್ತಕವಿಲ್ಲದೇ ವಿದ್ಯಾರ್ಥಿಗಳಿಗೆ ತೊಂದರತೆಯಾಗುತ್ತಿತ್ತು. ಪ್ರಸ್ತುತ ಪಠ್ಯಪುಸ್ತಕವು ಈ ಕೊರತೆಯನ್ನು ನಿವಾರಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸಿಕೊಡಲಿದೆ ಎಂದು ಆಶಿಸುತ್ತೇನೆ.

ಪ್ರಸ್ತುತ ಪಠ್ಯಪುಸ್ತಕವನ್ನು ರೂಪಿಸುವ ನಿಟ್ಟಿನಲ್ಲಿ ಹಿಂದಿನ ಪಠ್ಯಕ್ರಮದಲ್ಲಿ ಮಾರ್ಪಾಡುಗಳನ್ನು ಮಾಡಿ ಪರಿಷ್ಕೃತಗೊಳಿಸಲಾಗಿದೆ. ಲಭ್ಯವಿರುವ ಇತರ ಸಂಗೀತ ಪಠ್ಯಪುಸ್ತಕಗಳಂತಲ್ಲದೇ, ಇದರಲ್ಲಿ ಶಾಸ್ತ್ರವಿಷಯವನ್ನು ಸಮಗ್ರವಾಗಿ ನಿರೂಪಿಸಿ ಪ್ರಾಯೋಗಿಕ ವಿಭಾಗವನ್ನು ಮಾದರಿಗಳಿಂದ ನಿರೂಪಿಸಲಾಗಿದೆ. ಈ ಮೂಲಕ ಶಿಕ್ಷಕರು ಪಠ್ಯಕ್ರಮದ ರಾಗಗಳಲ್ಲಿ ಉಕ್ತ ಮಾದರಿಗಳನ್ನಾಧರಿಸಿ ತಮ್ಮ ಜ್ಞಾನಭಂಡಾರದಲ್ಲಿನ ವಿವಿಧ ಚೀಜ,ಬಂದಿಶ್, ಗತ್, ಕಾಯದಾ ಇತ್ಯಾದಿಗಳನ್ನು ಕಲಿಸಲು ಅವಕಾಶ ಮಾಡಿಕೊಡಲಾಗಿದೆ. ಗುರು–ಶಿಷ್ಯ ಪರಂಪರಾಧಾರಿತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವು ಪ್ರತಿಯೊಬ್ಬ ಶಿಕ್ಷಕನಲ್ಲಿ ತನ್ನದೇ ಆದ ವೈಶಿಷ್ಟ್ಯಗಳಿಂದ ರೂಪುಗೊಳ್ಳುವುದರಿಂದ ಅದನ್ನು ಒಂದೇ ರೀತಿಯಾಗಿ ಕಲಿಸುವ ಕ್ರಮಕ್ಕಿಂತಲೂ ಆಯಾ ಶಿಕ್ಷಕರ ವೈಶಿಷ್ಟ್ಯಪೂರ್ಣ ಸಂಗೀತವಿದ್ಯೆಯು ವಿದ್ಯಾರ್ಥಿಗಳಿಗೆ ದೊರೆಯುವಂತಾಗಲಿ ಎಂಬುದೇ ಇದರ ಹಿಂದಿನ ಸದುದ್ದೇಶ.

ಪ್ರಸ್ತುತ ಪಠ್ಯಪುಸ್ತಕವನ್ನು ರೂಪಿಸುವಲ್ಲಿ ವಿಶೇಷ ಶ್ರಮವಹಿಸಿರುವ ಪಠ್ಯಪುಸ್ತಕ ರಚನಾ ಸಮಿತಿಯ ಸಂಚಾಲಕರಾದ ಎನ್.ಜಿ. ಅನಂತಮೂರ್ತಿ ಹಾಗೂ ಸದಸ್ಯರಾದ ಶ್ರೀ ಅನಂತ ಹೆಗಡೆ ವಾಜಗಾರ ಮತ್ತು ಶ್ರೀ ಗಣೇಶ ಗೊರಟಾ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕರಡುಪ್ರತಿಯನ್ನು ಅಂತಿಮ ರೂಪಕ್ಕೆ ತರುವಲ್ಲಿ ಇನ್ನೋರ್ವ ಸದಸ್ಯರಾದ ಸಿತಾರವಾದಕ ಶ್ರೀ ಅರಣ್ಯಕುಮಾರ ಅವರ ಸೇವೆ ಸ್ಮರಣಾರ್ಹವಾಗಿದೆ. ಅಂದವಾಗಿ ಅಕ್ಷರಜೋಡಣೆ ಮಾಡಿಕೊಟ್ಟಿರುವ ಧಾರವಾಡದ ವಿಶ್ವಾ ಗ್ರಾಫಿಕ್ಸ್‌ನವರಿ ಹಾಗು ಮುಖಪುಟವನ್ನು ರೂಪಿಸಿಕೊಟ್ಟ ಶ್ರೀಮತಿ ವಿಶಾಲಾಕ್ಷಿ ಚಿಕ್ಕಮಠ ಅವರಿಗೆ ಧನ್ಯವಾದಗಳು. ಈ ಪಠ್ಯಪುಸ್ತಕ ರೂಪಿಸುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹಾಗೂ ಇದರ ರೂವಾರಿಗಳಾದ ಪದವಿಪೂರ್ವ ಶಿಕ್ಷಣ ಇಲಾಖೆಯ ಮಾನ್ಯ ಕಾರ್ಯದರ್ಶಿ ಡಾ.ಎಂ.ಎನ್. ಕಟ್ಟಿಯವರಿಗೂ ವಿಶೇಷವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಬೆಂಗಳೂರು

ಡಾ. ಶ್ರೀಮತಿ ಕಲಾವತಿ ದೊರೈ
ಅಧ್ಯಕ್ಷರು

## ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು

1. **ಡಾ॥ ಕಲಾವತಿ ಎಚ್. ದೊರೆ** — ಅಧ್ಯಕ್ಷರು
   ಸಂಗೀತ ಉಪನ್ಯಾಸಕರು,
   ಗೋದೂತಾಯಿ ಪ.ಪು. ಮಹಿಳಾ ಮಹಾವಿದ್ಯಾಲಯ
   ಗುಲ್ಬರ್ಗಾ

2. **ಶ್ರೀ ಅನಂತಮೂರ್ತಿ** — ಸಂಚಾಲಕರು
   ಸಂಗೀತ ಉಪನ್ಯಾಸಕರು,
   ಎಸ್.ಡಿ.ಎಂ. ಕಾಲೇಜು,
   ಹೊನ್ನಾವರ

3. **ಶ್ರೀ ಅನಂತ ಹೆಗಡೆ ವಾಜಗಾರ** — ಸದಸ್ಯರು
   ಸಂಗೀತ ಉಪನ್ಯಾಸಕರು,
   ಎಂ.ಇ.ಎಸ್. ಪಿ.ಯು. ಕಾಲೇಜು,
   ಶಿರಸಿ.

4. **ಶ್ರೀ ಅರಣ್ಯಕುಮಾರ** — ಸದಸ್ಯರು
   ಸಂಗೀತವಾದಕರು ಮತ್ತು ಸಂಗೀತಗಾರರು,
   ಧಾರವಾಡ

5. **ಶ್ರೀ ಗಣೇಶ ಗೊರಟಾ** — ಸದಸ್ಯರು
   ಉಪನ್ಯಾಸಕರು,
   ಕೆ.ಎಸ್.ಜಿ.ಹೆಚ್.
   ಸಂಗೀತ ಮತ್ತು ಪ್ರದರ್ಶಕ ಕಲೆಗಳ
   ವಿಶ್ವವಿದ್ಯಾಲಯ, ಮೈಸೂರು.

## ಪರಿವಿಡಿ

ಮುನ್ನುಡಿ
ಸಂಪಾದಕರ ಮಾತು
ಪರಿಷ್ಕೃತ ಪಠ್ಯಕ್ರಮ ಹಾಗು ಪಠ್ಯವಸ್ತು

**ಶಾಸ್ತ್ರ ವಿಭಾಗ**

| | |
|---|---|
| ಅಧ್ಯಾಯ–1 ಸಂಗೀತ ಕಲೆಯ ಉತ್ಪತ್ತಿ | 1 |
| ಅಧ್ಯಾಯ–2 ಲಲಿತ ಕಲೆಗಳಲ್ಲಿ ಸಂಗೀತದ ಸ್ಥಾನ | 6 |
| ಅಧ್ಯಾಯ–3 ಪಾರಿಭಾಷಿಕ ಶಬ್ಧಗಳ ವಿವರಣೆ | 9 |
| ಅಧ್ಯಾಯ–4 ಹಿಂದುಸ್ತಾನಿ ಮತ್ತು ಕರ್ನಾಟಕೀ ಸಂಗೀತ ಪದ್ಧತಿಗಳ ಅಧ್ಯಯನ | 13 |
| ಅಧ್ಯಾಯ–5 ಸಂಗೀತದಲ್ಲಿ ತಾಲ ಮತ್ತು ಲಯದ ಮಹತ್ತ್ವ | 17 |
| ಅಧ್ಯಾಯ–6 ಸಂಗೀತಜ್ಞರ ಜೀವನ ಚರಿತ್ರೆಗಳು | 19 |
| ಅಧ್ಯಾಯ–7 ಪಂಡಿತ ಭಾತ್‌ಖಂಡೆ ಸ್ವರಲಿಪಿ ಪದ್ಧತಿಯ ಪರಿಚಯ | 47 |
| ಅಧ್ಯಾಯ–8 ಜನಪದ ಸಂಗೀತ | 49 |
| ಅಧ್ಯಾಯ–9 ಹಿಂದೂಸ್ತಾನಿ ಸಂಗೀತದ ಗೇಯ ಪ್ರಕಾರಗಳ ಪರಿಚಯ | 53 |
| ಅಧ್ಯಾಯ–10 ಸಂಗೀತದಿಂದಾಗುವ ಪ್ರಯೋಜನಗಳು | 57 |
| ಅಧ್ಯಾಯ–11 ಸಂಗೀತ ವಾದ್ಯಗಳ ವರ್ಗೀಕರಣ | 60 |

**ಪ್ರಾಯೋಗಿಕ ವಿಭಾಗ ಗಾಯನ ಮತ್ತು ಸಿತಾರ**

| | |
|---|---|
| ರಾಗಗಳ ವರ್ಣನೆ | 68 |
| ಮಾದರಿ ಛೋಟಾಖ್ಯಾಲ ಮತ್ತು ಲಕ್ಷಣಗೀತೆ | 71 |
| ಮಾದರಿ ರಜಾಖಾನಿ ಗತ್, ತೋಡಾ ಮತ್ತು ಝ್ಯಾಲಾ | 73 |

**ಪ್ರಾಯೋಗಿಕ ವಿಭಾಗ ತಬಲಾ**

| | |
|---|---|
| ತಬಲಾದ ದಶವರ್ಣಗಳು ಹಾಗೂ ತಾಲಗಳ ಪರಿಚಯ | 75 |
| ಮಾದರಿ ತಾಲಗಳ ದುಗುನ್ ಹಾಗು ಬದಲ್ ಠೇಕಾಗಳು | 77 |
| ಮಾದರಿ ಕಾಯದಾ ಮತ್ತು ಸಾಥ ಸಂಗತ್ ವಿಧಾನ | 78 |
| ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರಗಳು | 80 |
| ಗ್ರಂಥಋಣ | 83 |

# ಪ್ರಥಮ ಪಿ.ಯು.ಸಿ.ಹಿಂದೂಸ್ಥಾನಿ ಸಂಗೀತ

## ಪರಿಷ್ಕೃತ ಪಠ್ಯಕ್ರಮ

* ಕಲಿಕಾ ಅವಧಿ:– ಒಂದು ವಾರದಲ್ಲಿ ನಾಲ್ಕು ಘಂಟೆ ಪ್ರಾಯೋಗಿಕ ಒಂದು ಘಂಟೆ ಶಾಸ್ತ್ರ ತರಗತಿಗಳು.
* ವಿದ್ಯಾರ್ಥಿಗಳ ಸಂಖ್ಯೆ:– ಪ್ರಾಯೋಗಿಕ ತರಗತಿಗಳಿಗೆ ಪ್ರತಿ ಬ್ಯಾಚ್‌ಗೆ ಗರಿಷ್ಠ ಐದು ವಿದ್ಯಾರ್ಥಿಗಳು
* ಗಾಯನ, ತಬಲಾ, ಸಿತಾರ, ಪ್ರತ್ಯೇಕ ತರಗತಿಗಳು.
* ಬಾಲಕ ಬಾಲಕಿಯರ ಪ್ರತ್ಯೇಕ ಪ್ರಾಯೋಗಿಕ ತರಗತಿಗಳು.
* ಶಾಸ್ತ್ರ ವಿಭಾಗ:– ಗಾಯನ, ತಬಲಾ, ಸಿತಾರ, ವಿಷಯಗಳಿಗೆ ಶಾಸ್ತ್ರ ಪಠ್ಯವಸ್ತು, ಸಮಾನ. ವಾರದಲ್ಲಿ ಒಂದು ಘಂಟೆಯ ಅವಧಿ.
* ಆಂತರಿಕ ಗುಣಗಳಿಗಾಗಿ ವಾರಕ್ಕೆ ಒಂದು ಘಂಟೆಯ ನಿಯೋಜಿತ ತರಗತಿ
* ಪ್ರಾಯೋಗಿಕ ಅಂಕ:– 60 – ತೇರ್ಗಡೆಗೆ ಕನಿಷ್ಠ ಅಂಕ 20.
* ಶಾಸ್ತ್ರ ವಿಷಯ ಅಂಕ:– 40 – ತೇರ್ಗಡೆಗೆ ಕನಿಷ್ಠ ಅಂಕ 10.
* (ಹಾಜರಾತಿ, ಜರ್ನಲ್ ಮತ್ತು ಆಂತರಿಕ ಗುಣಮಟ್ಟ)

## ಪರೀಕ್ಷಾ ವಿಧಾನ

* ಒಬ್ಬ ವಿದ್ಯಾರ್ಥಿಗೆ 25 ನಿಮಿಷಗಳ ಒಂದು ಪ್ರಾಯೋಗಿಕ ಪರೀಕ್ಷೆ.
* ಶಾಸ್ತ್ರ ಪರೀಕ್ಷೆಯ ಅವಧಿ ಒಟ್ಟು 2 ಘಂಟೆ 15 ನಿಮಿಷ.
* ಶಾಸ್ತ್ರ ಮತ್ತು ಪ್ರಾಯೋಗಿಕ ಪರೀಕ್ಷೆಗಳಲ್ಲಿ ಪ್ರತ್ಯೇಕ ತೇರ್ಗಡೆ ಅನಿವಾರ್ಯ.
* ಒಟ್ಟು ನೂರು ಅಂಕಗಳಿಗೆ ಕನಿಷ್ಠ 35 ಪ್ರತಿಶತ ಅಂಕಗಳು ತೇರ್ಗಡೆ ಅನಿವಾರ್ಯ.
* ದೃಶ್ಯ ಶ್ರವಣ ಅವಧಿ (ಸಿ.ಡಿ. ಕ್ಯಾಸೆಟ್ ಇತ್ಯಾದಿಗಳು) ಒಂದು ಶೈಕ್ಷಣಿಕ ವರ್ಷಕ್ಕೆ 12 ಘಂಟೆಗಳು (ಕಡ್ಡಾಯವಾಗಿ)

**ಬೋಧನಾ ಅವಧಿ**

* ಒಂದು ಶೈಕ್ಷಣಿಕ ವರ್ಷಕ್ಕೆ ಪ್ರಾಯೋಗಿಕ ತರಗತಿಗಳು 90 ಘಂಟೆಗಳು ಶಾಸ್ತ್ರ ತರಗತಿಗಳ 30 ಘಂಟೆಗಳು.
* ದೃಶ್ಯ– ಶ್ರವಣ ಅವಧಿ 12 ಘಂಟೆಗಳು.
* ಗ ಎ ೯ ಪರೀಕ್ಷೆ 06 ಘಂಟೆಗಳು
* ವಿಶೇಷ ಬೋಧನೆ ಮತ್ತು ಚರ್ಚೆ 06 ಘಂಟೆಗಳು
* ಪುನರಾವಲೋಕನ 06 ತಾಸುಗಳು. ಒಟ್ಟು–150 ಘಂಟೆಗಳು

**ಶಾಸ್ತ್ರ ಪಠ್ಯವಸ್ತು**

1. ಸಂಗೀತದ ಉತ್ಪತ್ತಿ, ಪೌರಾಣಿಕ ಹಾಗೂ ವೈಜ್ಞಾನಿಕ ದೃಷ್ಠಿಯಲ್ಲಿ (3 ಘಂಟೆಗಳು)
2. ಲಲಿತಕಲೆಗಳಲ್ಲಿ ಸಂಗೀತದ ಸ್ಥಾನ (1 ಘಂಟೆಗಳು)
3. ಸಂಗೀತದ ಪಾರಿಭಾಷಿಕ ಶಬ್ದಗಳ ಪರಿಚಯ ಸಂಗೀತ, ಸ್ವರ, ಶೃತಿ, ನಾದ, ಸಪ್ತಕ, ಶುದ್ಧ, ಕೋಮಲ, ತೀವ್ರ, ಪಕಡ್, ಆರೋಹ, ಅವರೋಹ, ತಾಲ, ಲಯ, ಮಾತ್ರಾ, ಸಮ್, ಖಾಲಿ, ಭರಿ, ದುಗುನ್, ತಿಗುನ್, ಚೌಗುನ್, ಆವರ್ತನ, ಕಾಯದಾ. (4 ಘಂಟೆಗಳು)
4. ಹಿಂದೂಸ್ತಾನಿ ಹಾಗೂ ಕರ್ನಾಟಕೀ ಸಂಗೀತ ಪದ್ಧತಿಗಳ ಪರಿಚಯ ಈ ಎರಡೂ ಶೈಲಿಗಳಲ್ಲಿಯ ಸಾಮ್ಯತೆ ಹಾಗೂ ವ್ಯತ್ಯಾಸಗಳು (3 ಘಂಟೆಗಳು)
5. ಸಂಗೀತದಲ್ಲಿ ತಾಲ ಮತ್ತು ಲಯದ ಮಹತ್ವ (2 ಘಂಟೆಗಳು)
6. ಮಹಾನ್ ಸಂಗೀತಜ್ಞರ ಮತ್ತು ಜೀವನ ಚರಿತ್ರೆ ಮತ್ತು ಅವರ ಕೊಡುಗೆಗಳು ಭರತ, ಸಾರಂಗ ದೇವ, ತಾನ್‌ಸೇನ್, ಅಮೀರ್ ಖುಸ್ರೋ, ಪಂ.ಭೀಮಸೇನ ಜೋಶಿ, ಪಂ.ರವಿಶಂಕರ, ಪಂ.ಬಸವರಾಜ ರಾಜಗುರು, ಪಂ.ಬಸವರಾಜ ಬೆಂಡಿಗೇರಿ, ಸಂಗೀತರತ್ನ ರೆಹಮಂತ್ ಖಾನ್, ಉ.ಅಲ್ಲಾರಖಾ. (4 ಘಂಟೆಗಳು)
7. ಪಂ. ಬಾತಖಂಡೆ ಸ್ವರ ತಾಲ ಲಿಪಿ ಪದ್ಧತಿಯ ಪರಿಚಯ (2 ಘಂಟೆಗಳು)

8. ಜನಪದ ಸಂಗೀತ ಮತ್ತು ಕರ್ನಾಟಕದ ವಿವಿಧ ಜನಪದ ಕಲಾ ಪ್ರಕಾರಗಳು (4 ಘಂಟೆಗಳು)

9. ಹಿಂದೂಸ್ಥಾನಿ ಸಂಗೀತದ ಗೇಯ ಪ್ರಕಾರಗಳ ಪರಿಚಯ ಧ್ರುಪದ್, ಖ್ಯಾಲ್, ಭಜನ್, ಭಾವಗೀತ, ವಚನ, ದಾಸರಪದ (3 ಘಂಟೆಗಳು)

10. ಸಂಗೀತದಿಂದಾಗುವ ಪ್ರಯೋಜನಗಳು (2 ಘಂಟೆಗಳು)

11. ಸಂಗೀತ ವಾದ್ಯಗಳ ಸಾಮಾನ್ಯ ವರ್ಗೀಕರಣ: ತಾನಪುರಾ, ಹಾರ್ಮೋನಿಯಂ, ಸಿತಾರ್, ತಬಲಾಗಳ ಸಚಿತ್ರ ಪರಿಚಯ (2 ಘಂಟೆಗಳು)

**ಪ್ರಾಯೋಗಿಕ ವಿಭಾಗ – ಗಾಯನ**

* ಅಲಂಕಾರ ಸ್ವರಗಳನ್ನು ತ್ರಿತಾಳ, ದಾದರಾ, ಕೆಹರವಾ ತಾಳಗಳಲ್ಲಿ ದುಗುನ ಲಯದಲ್ಲಿ ಹಾಡಲು ತಿಳಿದಿರಬೇಕು. (10 ಘಂಟೆಗಳು)

* ರಾಗಗಳು : ಭೂಪ, ಭೈರವ್, ಕಾಫಿ, ಬೃಂದಾವನಿ ಸಾರಂಗ, ಭಾಗೇಶ್ರೀ, ದುರ್ಗಾ ಈ ರಾಗಗಳಲ್ಲಿ ಛೋಟಾಖ್ಯಾಲ್ ಹಾಡಬೇಕು.
(60 ಘಂಟೆಗಳು)

* ಈ ಮೇಲಿನ ರಾಗಗಳ ವರ್ಣನೆ ಹಾಗೂ ಲಕ್ಷಣಗೀತೆ ಮತ್ತು ಛೋಟಾಖ್ಯಾಲನ್ನು ಎರಡು ಆಲಾಪ ಎರಡು ತಾನ್‌ಗಳೊಂದಿಗೆ ಹಾಡಲು ತಿಳಿದಿರಬೇಕು. (10 ಘಂಟೆಗಳು)

* ತಾಳಗಳು : ತ್ರಿತಾಳ, ದಾದರಾ, ಕೆಹೆರವಾ, ಝುಪ್ತಾಲ ಈ ತಾಳಗಳನ್ನು ಸಂಪೂರ್ಣ ಮಾಹಿತಿಯೊಂದಿಗೆ ಪೆಟ್ಟು, ಹುಸಿ, ಸಹಿತ ಕೈಯಲ್ಲಿ ಹಾಕಲು ತಿಳಿದಿರಬೇಕು. (10 ಘಂಟೆಗಳು)

**ಪ್ರಾಯೋಗಿಕ ವಿಭಾಗ : ಸಿತಾರ**

* ಅಲಂಕಾರ ಸ್ವರಗಳನ್ನು ಪಲ್ಟಾಗಳೊಂದಿಗೆ ದಾದರಾ, ತ್ರಿತಾಳ, ಕೆಹರವಾ ಈ ತಾಳಗಳಲ್ಲಿ ದುಗುನ ಲಯದಲ್ಲಿ ನುಡಿಸಲು ಬರಬೇಕು. (10 ಘಂಟೆಗಳು)

* ಬೂಪ, ಭೈರವ್, ಕಾಫಿ, ಬೃಂದಾವನಿ ಸಾರಂಗ, ಭಾಗೇಶ್ರೀ, ದುರ್ಗಾ ರಾಗಗಳ ರಜಾಖಾನಿಗತ್ ನುಡಿಸಲು ತಿಳಿದಿರಬೇಕು. (60 ಘಂಟೆಗಳು)

* ಈ ಮೇಲಿನ ರಾಗಗಳ ವರ್ಣನೆ ಹಾಗೂ ರಜಾಖಾನಿಗತ್‌ಗಳಲ್ಲಿ ಎರಡು ಆಲಾಪ, ಎರಡು ತಾನ್‌ಗಳನ್ನು ನುಡಿಸಲು ತಿಳಿದಿರಬೇಕು. (10 ಘಂಟೆಗಳು)
* ತಾಳಗಳು:– ತ್ರಿತಾಳ, ದಾದರಾ, ಕೆಹೆರವಾ, ಝುಪ್ತಾಲ ಈ ತಾಳಗಳನ್ನು ಸಂಪೂರ್ಣ ಮಾಹಿತಿಯೊಂದಿಗೆ ಪೆಟ್ಟು, ಹುಸಿ, ಸಹಿತ ಕೈಯಲ್ಲಿ ಹಾಕಲು ತಿಳಿದಿರಬೇಕು. (10 ಘಂಟೆಗಳು)

**ಪ್ರಾಯೋಗಿಕ ವಿಭಾಗ – ತಬಲಾ**

1. ಈ ಕೆಳಗಿನ ತಬಲಾ ಬೋಲ್ (ವರ್ಣ)ಗಳನ್ನು ನುಡಿಸುವ ಅಭ್ಯಾಸ. ತಬಲಾದ ಮೂಲ ದಶವರ್ಣಗಳ ಪರಿಚಯ ತಾ, ಗೆ, ಧಾ, ತಿನ್, ತಿಟ, ತಿರಕಿಟ, ತ್ರಕ, ಧಿನ್, ಇತ್ಯಾದಿ (12 ಘಂಟೆಗಳು)
2. ದಾದರಾ, ಕೆಹರವಾ, ತಿನ್‌ತಾಲ, ಝುಪ್ತಾಲ, ಏಕತಾಲ, ಧುಮಾಳಿ, ಭಜನ್‌ಠೇಕಾ ತಾಲಗಳ ಪರಿಚಯ ಸಹಿತ ನುಡಿಸುವ ಅಭ್ಯಾಸ. (20 ಘಂಟೆಗಳು)
3. ದಾದರಾ, ಕೆಹರವಾ, ತಿನ್‌ತಾಲ, ಝುಪ್ತಾಲ, ಏಕತಾಲ ಹಾಗೂ ಧುಮಾಳಿ ತಾಲಗಳ ದುಗುನ್ ಅಭ್ಯಾಸ (ಮೌಖಿಕ ಹಾಗೂ ಪ್ರಾಯೋಗಿಕವಾಗಿ). (14 ಘಂಟೆಗಳು)
4. ದಾದರಾ, ಕೆಹೆರವಾ, ತೀನ್‌ತಾಲ ಹಾಗೂ ಝುಪ್ತಾಲಗಳಲ್ಲಿ ಬದಲ್‌ಠೇಕಾಗಳ ಅಭ್ಯಾಸ (16 ಘಂಟೆಗಳು)
5. ತೀನ್‌ತಾಲದ ಒಂದು ಕಾಯದಾವನ್ನು 5 ಪಲ್ಟಾಗಳು ಮತ್ತು ತಿಹಾಯಿ ಸಹಿತ ನುಡಿಸುವದು (16 ಘಂಟೆಗಳು)
6. ತೀನ್‌ತಾಲ ಹಾಗೂ ಭಜನ್‌ಠೇಕಾಗಳನ್ನು ಸಾಥ್‌ಸಂಗತ್‌ಗಾಗಿ ನುಡಿಸುವ ಅಭ್ಯಾಸ. (12 ಘಂಟೆಗಳು)

# ಅಧ್ಯಾಯ–1

## ಸಂಗೀತ ಕಲೆಯ ಉತ್ಪತ್ತಿ

ಸಂಗೀತವು ಅತ್ಯಂತ ಪುರಾತನ ಕಲೆಯಾಗಿದ್ದು, ಅದರ ಉತ್ಪತ್ತಿಯು ಎಂದು, ಯಾವಾಗ ಆಯಿತು ಎಂದು ಖಚಿತವಾಗಿ ಹೇಳಲು ಬರುವಂತಿಲ್ಲ. ಈ ವಿಶ್ವದ ಹುಟ್ಟಿನೊಂದಿಗೇ ಸಂಗೀತವು ಹುಟ್ಟಿಕೊಂಡು ಬಂದಿದೆ. ವೇದಕಾಲದ ಪುರಾಣ, ಪುಣ್ಯಕಥೆಗಳ ಆಳದಲ್ಲಿ ಅದರ ಮೂಲವು ಮುಳುಗಿ ಹೋಗಿದ್ದು, ಐತಿಹಾಸಿಕ ಸತ್ಯಕ್ಕೆ ವ್ಯತಿರಿಕ್ತವಾಗಿದೆ. ಆದರೂ ಸಂಗೀತದ ಮೂಲವನ್ನು ಕುರಿತು ವಿವೇಚಿಸುವಾಗ ನಾವು ಈ ಪುರಾಣ – ಪುಣ್ಯ ಕಥೆಗಳ ಸಹಾಯ ಕೋರದೆ ಬೇರೆ ಗತ್ಯಂತರವಿಲ್ಲ. ಏಕೆಂದರೆ ಪುರಾಣಗಳು ಹಿಂದುಗಳ ಧಾರ್ಮಿಕ ಗ್ರಂಥಗಳಾಗಿದ್ದು, ಅವುಗಳಲ್ಲಿ ವರ್ಣಿತವಾದ ಸಂಗೀತ ಕಲೆಯ ಪೌರಾಣಿಕ ಸಂಬಂಧವು ಧಾರ್ಮಿಕವಾಗಿದೆ. ಭಾರತೀಯ ಸಂಗೀತ ಕಲಾವಿದನು ನಾದವನ್ನು ಬ್ರಹ್ಮವೆಂದು ಗುರುತಿಸಿ, ಸಂಗೀತವನ್ನು ಭಕ್ತಿ, ಶ್ರದ್ಧೆಗಳಿಂದ ಇಂದಿನವರೆಗೂ ಆರಾಧಿಸುತ್ತಾ ಬಂದಿದ್ದಾನೆ.

ಸಂಗೀತದ ಉತ್ಪತ್ತಿಯನ್ನು ಕುರಿತು ಮುಖ್ಯವಾಗಿ ಎರಡು ದೃಷ್ಟಿಗಳು ನಮಗೆ ಕಂಡು ಬರುತ್ತವೆ.

1. ಪೌರಾಣಿಕ ದೃಷ್ಟಿ
2. ವೈಜ್ಞಾನಿಕ ದೃಷ್ಟಿ

## ಪೌರಾಣಿಕ ದೃಷ್ಟಿ

ಸಂಗೀತದ ಹುಟ್ಟು ದೇವ ದೇವತೆಗಳ ಕಥೆಗಳ ಸಂಬಂಧವನ್ನು ಹೊಂದಿದ್ದು ಪೌರಾಣಿಕ ಮಹತ್ವವನ್ನು ಹೊಂದಿದೆ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಆದ್ಯ ದೇವತೆಗಳಾಗಿದ್ದು, ಬ್ರಹ್ಮನು ಸೃಷ್ಟಿಯ ಚರಾಚರವಸ್ತುವಿನ ಮೂಲಕರ್ತನಾಗಿದ್ದಾನೆ. ಶ್ರೀವಿಷ್ಣುವು ಚರಾಚರ ವಸ್ತುವಿನ ರಕ್ಷಕನಾಗಿದ್ದಾನೆ. ಮಹೇಶ್ವರನು ಇದೆಲ್ಲದರ ಲಯಕರ್ತನಾಗಿದ್ದಾನೆ. ಈ ತ್ರಿಮೂರ್ತಿಗಳಲ್ಲಿ ಯಾರಿಂದ ಸಂಗೀತದ ಉತ್ಪತ್ತಿಯಾಯಿತೆಂಬ ವಿಷಯದಲ್ಲಿ ಭಿನ್ನಾಗಿಭಿಪ್ರಾಯಗಳಿದ್ದು, ಅವುಗಳನ್ನು ನಾವು ಹೀಗೆ ಸಂಗ್ರಹಿಸಬಹುದು.

ತ್ರಿಲೋಕ ಕಂಟಕನಾದ ವೃತಾಸುರನನ್ನು ಸಂಹರಿಸಿದಾಗ ಶಿವನು ಪರಮಾನಂದದಿಂದ ತಾಂಡವ ನೃತ್ಯವನ್ನು ಮಾಡಿದನೆಂದೂ, ಆಗ ಸಂಗೀತದ

ಉತ್ಪತ್ತಿಯಾಯಿತೆಂದೂ ವರ್ಣಿತವಾಗಿದೆ ತಾಂಡವ ನೃತ್ಯ ಮಾಡುವಾಗ ಶಿವನ ಪದವಿನ್ಯಾಸಗತಿಗೆ ಹೊಂದಿಕೊಂಡು ತಾಲಸಂಗೀತವನ್ನು ರಚಿಸಲು ಬ್ರಹ್ಮನು ಶಿವಪುತ್ರನಾದ ಗಣಪತಿಗೆ ಡಮರು ವಾದ್ಯವನ್ನು ನಿರ್ಮಿಸಿಕೊಟ್ಟನೆಂದು ಶಿವನಕೈಯ ಡಮರುವೇ ಆಧುನಿಕ ಚರ್ಮವಾದ್ಯಗಳಿಗೆ ಮೂಲವಾಯಿತೆಂದೂ ಮತ್ತು ಅದರಂತೆ ಆತನ ಕೈಯಲ್ಲಿಯ ಪಿನಾಕವೇ ಎಲ್ಲ ತಂತುವಾದ್ಯಗಳ ಆದಿವಾದ್ಯವೆಂದೂ ತಿಳಿದು ಬರುತ್ತದೆ.

ಸದಾಶಿವನ ಪಂಚಮುಖಗಳಿಂದ ಮೂಲವಾಗಿ ಐದು ರಾಗಗಳು ಮೊದಲು ಹುಟ್ಟಿಕೊಂಡವು ಪೂರ್ವಮುಖದಿಂದ ಭೈರವರಾಗ, ಪಶ್ಚಿಮ ಮುಖದಿಂದ ಹಿಂಡೋಳ ರಾಗ, ಉತ್ತರ ಮುಖದಿಂದ ಮೇಘರಾಗ, ದಕ್ಷಿಣ ಮುಖದಿಂದ ದೀಪಕರಾಗ ಮತ್ತು ಆಕಾಶಮುಖದಿಂದ ಶ್ರೀರಾಗಗಳು ಹುಟ್ಟಿಕೊಂಡು ಅನೇಕ ರಾಗರಾಗಿಣಿಗಳಿಗೆ ಮೂಲವಾದವು.

ಸಂಗೀತ ದರ್ಪಣ ಗ್ರಂಥ ಕತೃವಾದ ದಾಮೋದರ ಪಂಡಿತನು ಸಂಗೀತವು ಶೂನ್ಯದಲ್ಲಿ ಸಾಕಾರವು ರೂಪಗೊಂಡಂತೆ, ಪರಬ್ರಹ್ಮನ ಇಚ್ಛಾಶಕ್ತಿಯಲ್ಲಿ ಮೈಗೊಂಡು, ಭರತಮುನಿಗೆ ಬ್ರಹ್ಮನ ವರಪ್ರಸಾದವಾಗಿ ದೊರೆಯಿತು ಎಂದಿದ್ದಾನೆ.

ಸಾಮವೇದಾತ್ ಇದಂ ಗೀತಂ ಸಂಜಗ್ರಹಃ ಪಿತಾಮಹ ಎಂದರೆ ಬ್ರಹ್ಮನು ಸಂಗೀತವನ್ನು ಸಾಮವೇದದಿಂದ ಎತ್ತಿಕೊಂಡನೆಂದು, ಸಾಮವೇದವೇ ಸಂಗೀತಕ್ಕೆ ಮೂಲ ಉತ್ಪತ್ತಿ ಸ್ಥಾನವೆಂದೂ, ಸ್ವರಮೇಲ ಕಲಾನಿಧಿಯ ಲೇಖಕನಾದ ರಾಮಮಾತ್ಯನು ಅಭಿಪ್ರಾಯಪಡುತ್ತಾನೆ.

ಹೀಗೆ ನಾವು ಸಂಗೀತದ ಉಗಮದ ಬಗೆಗೆ ಇನ್ನೂ ಅನೇಕ ಅಭಿಪ್ರಾಯಗಳಿಗೆ ಸಂಗ್ರಹಿಸಬಹುದು. ಸಂಗೀತವು ಶಿವನಿಂದಲೋ, ಬ್ರಹ್ಮನಿಂದಲೋ, ಸರಸ್ವತಿಯಿಂದಲೋ ಅಥವಾ ಇನ್ನಾವ ದೇವ–ದೇವತೆಗಳಿಂದಲೋ ಉತ್ಪತ್ತಿಯಾಯಿತು ಎಂಬುದು, ಸಂಗೀತ ಕಲೆಯ ವಿಷಯದಲ್ಲಿ ಇರಿಸಿಕೊಂಡ ಕಲಾ ಆರಾಧಕರ ಭಕ್ತಿಪರವಶತೆ ಯ ನಂಬುಗೆಯಾಗಿದೆ. ಭಾರತೀಯ ಕಲಾವಿದನು ಧಾರ್ಮಿಕ ಮನೋವೃತ್ತಿಯವನಾದುದರಿಂದ ಆತನು ಇಂಥ ನಂಬುಗೆಗಳಲ್ಲಿ ವಿಶ್ವಾಸವನ್ನಿಟ್ಟುಕೊಂಡು ಬಂದಿದ್ದಾನೆ. ಈ ನಂಬುಗೆ ಆತನ ಧಾರ್ಮಿಕ ಭಾವನೆಯ ಪ್ರತೀಕವಾಗಿದೆಯೇ ಹೊರತು ಅದಕ್ಕೆ ಬೇರೆ ಅರ್ಥವಲ್ಲ.

## ವೈಜ್ಞಾನಿಕ ದೃಷ್ಟಿ

ಸಂಗೀತದ ಹುಟ್ಟನ್ನು ಹಾಗೂ ಅದರ ವಿಕಾಸ ಕ್ರಮುವನ್ನು ಕುರಿತು ಇಂದಿನ ವಿಜ್ಞಾನಿಗಳು ಸಶಾಸ್ತ್ರೀಯವಾಗಿ ವಿವೇಚನೆ ಮಾಡಿ ಸಂಗೀತದ ಉತ್ಪತ್ತಿಯ ವಿಷಯದಲ್ಲಿ ಒಂದು ನಿರ್ಣಯಕ್ಕೆ ಬಂದಿದ್ದಾರೆ. ಇದು ವೈಜ್ಞಾನಿಕ ದೃಷ್ಟಿ.

ಚಾರ್ಲಸ್ ಡಾರ್ವಿನ್ನನ ಮಾನವನ ವಿಕಾಸ ಕ್ರಮವನ್ನು ಆಧಾರವಾಗಿಟ್ಟುಕೊಂಡು ಹೇಳುವುದಾದರೆ, ಸಂಗೀತದ ಹುಟ್ಟು ಆದಿಮಾನವನಿಂದ ನಿಸರ್ಗದಲ್ಲಿಯೇ ಆವಿಷ್ಕರಿಸಲ್ಪಟ್ಟಿತೆಂದೂ ಸಂಗೀತಕ್ಕೆ ಮೂಲವಾಗಿ ಸಪ್ತಸ್ವರಗಳನ್ನು ಆತನು ನಿಸರ್ಗದಲ್ಲಿಯ ಪಶುಪಕ್ಷಿಗಳಿಂದ ಕಂಡುಕೊಂಡನೆಂದೂ ತಿಳಿದು ಬರುತ್ತದೆ. ಅದು ಈ ಕೆಳಗಿನಂತಿದೆ.

| ಕ್ರ. ಸಂ. | ಸ್ವರ | ಸ್ವರದ ಹೆಸರು | ಪಶುಪಕ್ಷಿ |
|---|---|---|---|
| 1. | ಸಾ. | ಷಡ್ಜ | ನವಿಲು |
| 2. | ರೆ. | ರಿಷಭ | ಚಾತಕಪಕ್ಷಿ |
| 3. | ಗ | ಗಾಂಧಾರ | ಆಡು |
| 4. | ಮ | ಮಧ್ಯಮ | ಕ್ರೌಂಚಪಕ್ಷಿ |
| 5. | ಪ | ಪಂಚಮ | ಕೋಗಿಲೆ |
| 6. | ಧ | ಧೈವತ | ಕಪ್ಪೆ |
| 7. | ನಿ | ನಿಷಾದ | ಆನೆ |

ಸಂಗೀತದ ಉಗಮದ ಬಗೆಗಿನ ನಮ್ಮ ವಿಚಾರ ಪ್ರಣಾಲಿಯನ್ನು ಶಾಸ್ತ್ರೀಯ ಜಿಜ್ಞಾಸೆಯ ಒರೆಗಲ್ಲಿಗೆ ತಿಕ್ಕಿನೋಡಿದಾಗ, ಮೇಲಿನ ಮಾತಿನ ತಥ್ಯಾಂಶವು ಕಂಡುಬರುತ್ತದಲ್ಲದೆ ಸಂಗೀತಕ್ಕೆ ನಿಸರ್ಗವೇ ಮೂಲ ಸ್ಫೂರ್ತಿ ನೆಲೆಯಾಗಿದೆ ಎಂಬುದು ಮನದಟ್ಟಾಗುತ್ತದೆ.

ಈ ಪೃಥ್ವಿಯ ಮೇಲೆ ಮಾನವನ ಅಥವಾ ಯಾವುದೇ ಜೀವರಾಶಿಯ ಅಸ್ತಿತ್ವಕ್ಕಿಂತಲೂ, ಮೊದಲೇ ಸಂಗೀತವು ಅಸ್ತಿತ್ವದಲ್ಲಿದ್ದಿತೆಂದು ತಿಳಿದುಬರುತ್ತದೆ. ಪೃಥ್ವಿಯ ಹಾಗೂ ಇತರ ಗ್ರಹಗಳ ಭ್ರಮಣ ಗತಿಯಲ್ಲಿ ಸಂಗೀತವು ಇಡೀ ವಿಶ್ವವನ್ನೆಲ್ಲ ತನ್ನ ಗುಂಜಾರವದಲ್ಲಿ ಅಡಗಿಸಿದ್ದಿತು.

ಈ ಪೃಥ್ವಿಯ ಮೇಲೆ ಮಾನವನು ಉದಯವಾದಂದಿನಿಂದಲೂ, ಆತನು ಈ ಗೂಂಜಾರವದಲ್ಲಿ ಬೆಳೆದುಕೊಂಡು ಬಂದನು ಮುಂದೆ ಕಾಲಾವಧಿಯಲ್ಲಿ ಈ ಗೂಂಜಾರವದತ್ತ ಆತನ ಲಕ್ಷವು ಹರಿದಾಗ ಆತನಿಗೆ ಅತ್ಯಂತ ವಿಸ್ಮಯವೆನಿಸಿರಬೇಕು. ಬರಬರುತ್ತ ಈ ಗೂಂಜಾರವನ್ನು ಆತನು ತನ್ನ ಸುತ್ತಮುತ್ತಲಿನ ಪಶುಪಕ್ಷಿಗಳ ಕೂಜನದಲ್ಲಿಯೂ ಹಳ್ಳಕೊಳ್ಳಗಳ ತುಂಬ ಪ್ರಪಾತ ಜಲಪಾತಗಳಲ್ಲಿಯೂ, ಸಮುದ್ರದ ಉದ್ಘೋಷದಲ್ಲಿಯೂ ಕಂಡು ಗುರುತಿಸಿದನು. ನಂತರ ಆತನು ತನ್ನ ಸುತ್ತಮುತ್ತಲಿನ ಈ ಎಲ್ಲಾ ವಾತಾವರಣದಿಂದ ಪ್ರಭಾವಿತನಾಗಿ, ತಾನು ನಿಸರ್ಗದೊಂದಿಗೆ ದನಿಗೂಡಿಸಲು ಕಲಿತ. ಈ ಅನುಕರಣದಿಂದಾಗಿ ಆತನ ಕಲ್ಪನಾಶಕ್ತಿಯುಬೆಳಗಿ ಅದಕ್ಕೆ ಬುದ್ಧಿಯ ಮೆರಗು ಕೊಡಲು ತೊಡಗಿದನು. ಮುಂದೆ ಎಷ್ಟೋ ಕಾಲದ ನಂತರ ಇದೇ ಸಮಯಕ್ಕೆ ಭಾಷೆಯೂ ಅಸ್ತಿತ್ವದಲ್ಲಿ ಬಂದು, ತನ್ನಲ್ಲಿ ಉಂಟಾದ ಭಾವನೆಗಳನ್ನು ಸರಿಯಾಗಿ ವ್ಯಕ್ತಮಾಡುವಲ್ಲಿ ಹೆಚ್ಚು ಸಮರ್ಥಶೀಲನಾಗುತ್ತ ನಡೆದನು. ನಿಸರ್ಗದಲ್ಲಿಯ ಸಂಗೀತದಿಂದ ಪ್ರಭಾವಿತನಾಗಿ ಸ್ವರತಾಲ-ಲಯಗಳ ತರಂಗ ಧಾಟಿಯಲ್ಲಿ ಆತನು ತನ್ನ ಬದುಕನ್ನು ಹೊಂದಿಸಿಕೊಂಡು ಬಾಳತೊಡಗಿದನು. ಆದಿಮಾನವನು, ತೀವ್ರತರ ಭಾವನೆಗಳಿಂದ ಪ್ರೇರಿತನಾದಾಗ, ಆತನ ದೇಹದ ನರನರಗಳಲ್ಲಿಯೂ ರಕ್ತದ ಚಲನೆ, ಎದೆಯಬಡಿತ ಎಲ್ಲವೂ ಆತನನ್ನು ಸ್ವರತಾಲ-ಲಯದ ಧಾಟಿಯಲ್ಲಿ ಮುಪ್ಪುರಿಗೊಳಿಸಿದವು. ತತ್ಪರಿಣಾಮವಾಗಿ ಆತನು ಹಾಡಿನೊಂದಿಗೆ ಕುಣಿಯಲೂ ಕಲಿತನು. ಈ ಹಾಡು ಕುಣಿತಗಳು ಆತನ ಜೀವನದ ನಾಡಿಮಿಡಿತಗಳಾಗಿದ್ದುಕೊಂಡು, ಇಂದಿಗೂ ನಡೆದುಕೊಂಡು ಬಂದಿವೆ. ಹೀಗೆ ಆತನು ತನಗೇ ಅರಿವಿಲ್ಲದಂತೆ ಸಂಸ್ಕೃತಿಯ ಜೀವನದ ಬೀಡಿನತ್ತ ಸಾಗುತ್ತ ನಡೆದನು ಸಂಘಜೀವಿಯಾಗಿ ಒಂಟಿಜೀವನದ ಬೇಸರವನ್ನು ಬಿಸುಟಿಹಾಕಿದನು ತನ್ನ ಹಾಗೂ ತನ್ನ ಸಂಗಡಿಗರ ಸುಖ-ದುಃಖಗಳಲ್ಲಿ ಸಮಭಾಗಿಯಾಗಿ, ತನ್ನಲ್ಲಿ ಉಂಟಾದ ಭಾವಾವೇಶದ ವಿದ್ಯುತ್ ಲಹರಿಯನ್ನು ಜನಪದ ಸಂಗೀತದ ಮುಖಾಂತರ ಹರಸಿ ಹಗುರಾದನು.

1

ಹೀಗೆ ಸಂಗೀತವು ನಿಸರ್ಗದಲ್ಲಿ ಹುಟ್ಟಿಕೊಂಡು ಮಾನವನ ದೈಹಿಕ, ಬೌದ್ಧಿಕ ಮತ್ತು ಮಾನಸಿಕ ವಿಕಾಸದೊಂದಿಗೆ ಬೆಳೆದು ಬಂದು, ಋಗ್ವೇದದ ಸ್ತೋತ್ರಗಾನದ ವರೆಗೆ ಮುನ್ನಡೆದು ಭರತಮುನಿಯ ಪ್ರತಿಭೆಯಿಂದ ಶಾಸ್ತ್ರೀಯ ರೂಪವನ್ನು ಪಡೆಯಿತು ಮುಂದೆ ಕಾಲಾವಧಿಯಲ್ಲಿ ಅನೇಕ ವಿದ್ವನ್ಮಣಿಗಳಿಂದ ವೇದಕಾಲೀನ ಸಂಗೀತವು ವಿಸ್ತಾರ ಹೊಂದುತ್ತ ಇಂದಿನ ಮಟ್ಟಕ್ಕೆ ಬಂದಿದ್ದು ಮುಂದೆಯೂ ಅದರ ವಿಕಾಸದಲ್ಲಿ ಪ್ರಗತಿ ಅನಿವಾರ್ಯ ಏಕೆಂದರೆ ವಿಕಾಸ ಕ್ರಮವು ನಿಸರ್ಗದ ಮೂಲ ತತ್ವವಾಗಿದೆ.

# ಅಧ್ಯಾಯ–2

## ಲಲಿತ ಕಲೆಗಳಲ್ಲಿ ಸಂಗೀತದ ಸ್ಥಾನ

ಮನುಷ್ಯನು ವಿವಿಧ ರೀತಿಯಿಂದ, ವಿಭಿನ್ನ ಪ್ರಕಾರಗಳಿಂದ ಭಾವನೆಗಳನ್ನು ವ್ಯಕ್ತಪಡಿಸುವ ಕ್ರಿಯೆಯನ್ನು ಕಲೆ ಎನ್ನಬಹುದಾಗಿದೆ. ನಮ್ಮ ಮನಸ್ಸಿನಲ್ಲಿ ಆನಂದ, ದುಃಖ, ಕ್ರೌರ್ಯ, ಶೃಂಗಾರ, ಭಯ, ಭಕ್ತಿ ಭಾವಗಳು ಮೂಡುತ್ತಿರುತ್ತವೆ. ಇಂತಹ ವಿವಿಧ ಭಾವನೆಗಳನ್ನು ಕಲೆಯ ಮಾಧ್ಯಮದಿಂದಲೇ ವ್ಯಕ್ತಪಡಿಸಲಾಗುತ್ತದೆ. ಯಾವುದೇ ಸೃಜನಶೀಲ ಕಲಾವಿದನು ವಿವಿಧ ಭಾವನೆಗಳನ್ನು ಕಲೆಯ ಮೂಲಕ ಪ್ರದರ್ಶಿಸಿದಾಗ ಅದು ಮಾನವನ ಭಾವನೆಗಳಿಗೆ ಸ್ಪಂದಿಸಿ, ಅವನು ತನ್ನನ್ನು ತಾನು ಮರೆಯುತ್ತಾನೆ. ತನ್ನ ಸುತ್ತಲಿನ ಪರಿಸರವನ್ನೇ ಮರೆತು, ಕಲಾವಿದನು ಕಲೆಯ ಮೂಲಕ ಪ್ರದರ್ಶಿಸಿದ ಭಾವ ಲೊಕದಲ್ಲಿ ವಿಹರಿಸುತ್ತಾನೆ. ಹೀಗೆ ವಿವಿಧ ಭಾವನೆಗಳನ್ನು ವಿವಿಧ ಕಲಾ ಪ್ರಕಾರಗಳ ಮೂಲಕ ಪ್ರದರ್ಶಿಸಿ ಕಲಾವಿದ ಹಾಗೂ ಪ್ರೇಕ್ಷಕ ಸ್ಪಂದಿಸಿದಾಗ ಭಾವ ರಸೋತ್ಪತ್ತಿ ಉಂಟಾಗುತ್ತದೆ. ಮನಸ್ಸಿಗೆ ಸಂತೋಷ, ಸಮಾಧಾನ, ಸಂತೃಪ್ತಿ ಉಂಟಾಗುತ್ತದೆ. ಇಂತಹ **ರಸೋತ್ಪತ್ತಿಯುಂಟು ಮಾಡುವುದೇ** ಕಲೆಯ ಗುಣಧರ್ಮವಾಗಿದೆ. ರಸೋತ್ಪತ್ತಿಯನ್ನುಂಟುಮಾಡುವ ಇಂತಹ ವಿವಿಧ ಕಲೆಗಳನ್ನು ನಾವು ಲಲಿತ ಕಲೆಗಳು ಎನ್ನುತ್ತೇವೆ.

ಮಾನವನ ಬುದ್ಧಿ ವಿಕಾಸದೊಂದಿಗೇ ಆತನ ಅವಶ್ಯಕತೆಗಳೂ ಬೆಳೆದವು. ಆತ್ಮಾನಂದವನ್ನು ಹೊಂದುವ ಹಾಗೂ ವಿವಿಧ ಭಾವನೆಯನ್ನು ಪ್ರದರ್ಶಿಸುವ ಮಾಧ್ಯಮಗಳೂ ಬೆಳೆಯತೊಡಗಿದವು. ಹೀಗಾಗಿ ವಿಬಿನ್ನ ಕಲೆಗಳು ರೂಪುಗೊಂಡವು. ಲಲಿತ ಕಲೆಗಳಾದ ಸಾಹಿತ್ಯ, ಸಂಗೀತ ಹಾಗೂ ಶಿಲ್ಪಕಲೆಗಳು ಮನುಷ್ಯನನ್ನು ಸುಸಂಸ್ಕೃತನನ್ನಾಗಿ ಮಾಡಿ ದೈವತ್ವದೆಡೆಗೆ ಒಯ್ಯುತ್ತವೆ. ಸುಂದರ ಶಿಲ್ಪ ಕಲಾಕೃತಿಗಳನ್ನು ನೋಡಿದಾಗ, ವರ್ಣಮಯ ಚಿತ್ರಗಳನ್ನು ವೀಕ್ಷಿಸಿದಾಗ, ಗದ್ಯ–ಪದ್ಯ ಸಾಹಿತ್ಯಗಳನ್ನು ಓದಿದಾಗ; ಸಂಗೀತ ಶ್ರವಣ ಹಾಗೂ ನೃತ್ಯಗಳ ವೀಕ್ಷಣೆಯಿಂದ ನಮಗೆ ಆಗುವ ಆನಂದವೇ ಲಲಿತ ಕಲೆಗಳ ವಿಶೇಷತೆಯಾಗಿದೆ. ಇಂತಹ ಲಲಿತ ಕಲೆಗಳು ಅಭಿವೃದ್ಧಿ ಹೊಂದಿದಷ್ಟೂ ಒಂದು ದೇಶದ ಸಂಸ್ಕೃತಿಯು ಶ್ರೇಷ್ಠತೆಯನ್ನು ಹೊಂದಿ ಉತ್ತಮ ಸಮಾಜ ನಿರ್ಮಾಣವಾಗುವುದು. ಇಂದು ಭಾರತೀಯ ಸಂಸ್ಕೃತಿ, ಆಚಾರ–ವಿಚಾರಗಳು ಜಗತ್ತಿಗೇ ಮಾದರಿಯಾಗಿದೆಯೆಂದರೆ ಇದಕ್ಕೆ ಮುಖ್ಯ ಕಾರಣ

ನಮ್ಮಲ್ಲಿನ ಲಲಿತ ಕಲೆಗಳೇ ಆಗಿವೆ. ಮಾನವನ ಆಂತರಿಕ ಸ್ವಭಾವವನ್ನೇ ಲಲಿತ ಕಲೆಗಳು ಪ್ರದರ್ಶಿಸುವುದರಿಂದಾಗಿ, ಒಂದು ದೇಶದ ಜನರ ಸ್ವಭಾವಗಳು ಲಲಿತ ಕಲೆಗಳಿಂದ ಅರಿವಾಗುತ್ತದೆ. ಹೀಗಾಗಿಯೇ ನಮ್ಮ ದೇಶವನ್ನು ಶಾಂತಿಪ್ರಿಯ ದೇಶವೆನ್ನಲಾಗಿದೆ.

ಲಲಿತ ಕಲೆಗಳೆಲ್ಲೆಲ್ಲ ಸಂಗೀತ ಕಲೆಗೆ ಅತ್ಯಂತ ಮಹತ್ವದ ಸ್ಥಾನವನ್ನು ನೀಡಲಾಗಿದೆ. ಸಂಗೀತ ಕಲೆಯು ಶ್ರೇಷ್ಠ ಕಲೆಯೆಂಬುದಾಗಿ ಪ್ರಾಚೀನ ಕಾಲದಿಂದಲೂ ಮಾನ್ಯವಾಗಿದೆ. ಎಲ್ಲಾ ಕಲೆಗಳಿಗೂ ಮೂಲ ಪ್ರಕೃತಿಯೇ ಆಗಿದೆ. ಆಕಾಶ ಹಾಗೂ ಕಾಮನ ಬಿಲ್ಲಿನ ವೈವಿಧ್ಯಮಯ ಸೂಕ್ಷ್ಮ ವರ್ಣ ಛಾಯೆಗಳು, ಗಿಡ, ಮರ, ಪುಷ್ಪಗಳ ಸೌಂದರ್ಯ, ಭೂಮಿ, ನೀರು ಹೀಗೆ ಪ್ರಕೃತಿಯಲ್ಲಿ ಕಂಡುಬರುವ ಸೌಂದರ್ಯ ದೃಶ್ಯಗಳು ಚಿತ್ರಕಲೆಗೆ ಸ್ಫೂರ್ತಿಯನ್ನು ನೀಡಿವೆ. ಚಿತ್ರ ಕಲಾವಿದನು ವಿವಿಧ ವರ್ಣಗಳನ್ನು ಬಳಸಿ, ಕುಂಚದಿಂದ, ತಾನು ಕಂಡ ದೃಶ್ಯಗಳನ್ನು ಕಲ್ಪಿಸಿ, ಪ್ರಕೃತಿಯಲ್ಲಿ ಮೂಡಿದ ಸೌಂದರ್ಯಗಳನ್ನು ಚಿತ್ರಗಳಲ್ಲಿ ಸೆರೆ ಹಿಡಿದು ಸುಂದರ ಚಿತ್ರದ ರೂಪ ನೀಡುತ್ತಾನೆ. ವಾಸ್ತು ಶಿಲ್ಪದಲ್ಲಿ ಕಲಾವಿದನು ಕಲ್ಲು, ಮಣ್ಣು, ಲೋಹಗಳಿಂದ ಕನಸಿನ ಸೌಧವನ್ನು, ಕಟ್ಟಡವನ್ನು ಸಾಕಾರಗೊಳಿಸುತ್ತಾನೆ. ಹಾಗೆಯೇ ಉತ್ತಮ ಶಿಲ್ಪಿಯು ಸುತ್ತಿಗೆ, ಚಾಣಗಳಿಂದ ಕಲ್ಲನ್ನು ಕೊರೆದು ಅಂದವಾಗಿ ಕೆತ್ತಿ ಶಿಲ್ಪ ಕಲಾಕೃತಿಗಳನ್ನು ರಚಿಸಿ ಅದ್ಭುತ ರೂಪವನ್ನು ನೀಡುತ್ತಾನೆ. ಅಂತೆಯೇ ಸಾಹಿತ್ಯವೂ ಸಹ ಓದುಗರನ್ನು ಮುದಗೊಳಿಸುತ್ತದೆ. ಆದರೆ ಈ ಎಲ್ಲ ಲಲಿತ ಕಲೆಗಳಿಗಿಂತ ಸಂಗೀತವನ್ನು ಉನ್ನತ ಮಟ್ಟದಲ್ಲಿ ಇಡಬಹುದು, ಏಕೆಂದರೆ ಈ ಕಲೆಯು ಮನುಷ್ಯನ ಪ್ರತಿಭೆ ಹಾಗೂ ಕಲ್ಪನೆಗಳಿಂದಲೇ ಉಗಮವಾಗಿ ವಿಕಾಸಗೊಂಡಿದೆ. ಪ್ರಕೃತಿಯಲ್ಲಿ ಕಂಡುಬರುವ ಪಕ್ಷಿಗಳು, ಪ್ರಾಣಿಗಳು, ನದಿಯ ಜುಳು ಜುಳು ನಿನಾದ, ಗಾಳಿಯಿಂದ ಉತ್ಪತ್ತಿಯಾಗುವ ಶಬ್ಧಗಳು ಮುಂತಾದುವುಗಳು ಸಂಗೀತಕ್ಕೆ ಸ್ಫೂರ್ತಿಯಾಗಿವೆ. ಇಂತಹ ವೈವಿಧ್ಯಮಯವಾದ ಪ್ರಕೃತಿಯ ಶಬ್ಧಗಳನ್ನು ಮಾನವನು ತನ್ನ ಕಲ್ಪನಾಶಕ್ತಿಯಿಂದ ದೈವದತ್ತವಾದ ಕಂಠದ ಮೂಲಕ ನಾದ ವೈವಿಧ್ಯದಿಂದ ಅನುಕರಿಸಿ ಸ್ಫೂರ್ತಿಯನ್ನು ಪಡೆದಿದ್ದಾನೆ. ಪ್ರಕೃತಿಯಿಂದ ಅನುಕರಿಸಿದ ಇಂಪಾದ ಧ್ವನಿ ಹಾಗೂ ತನ್ನ ಪ್ರತಿಭೆಯಿಂದಾಗಿ ಮನುಷ್ಯನು ಸಂಗೀತ ಕಲೆಯನ್ನು ಉಳಿದೆಲ್ಲ ಕಲೆಗಳಿಗಿಂತ ಶ್ರೇಷ್ಠ ಮಟ್ಟಕ್ಕೆ ಒಯ್ದಿರುವನು.

ಸಂಗೀತವು ಅತಿ ಮಾಧುರ್ಯವನ್ನು ಹೊಂದಿರುವಂತಹ ಕಲೆಯಾಗಿದೆ. ಇದನ್ನು ಕೇಳಿದ ಕೂಡಲೇ ಆನಂದ ಉಂಟಾಗುತ್ತದೆ. ಯಾವುದೊಂದು ರಾಗದ

ಸ್ವರ ಸಂಚಾರವು ಶ್ರೋತೃವಿನ ಮನಸ್ಸಿಗೆ ಅತ್ಯಂತ ಹರ್ಷವನ್ನು ಉಂಟು ಮಾಡುತ್ತದೆ. ಸಂಗೀತ ವಾದ್ಯಗಳಾದ ವೀಣೆ, ಸಿತಾರ್, ತಬಲಾ ಇತ್ಯಾದಿಗಳ ವಾದನಗಳಿಂದ ಪ್ರೇಕ್ಷಕನಿಗೆ ಆನಂದ ಉಂಟಾಗುವುದು. ಆದರೆ ಇನ್ನೂ ಪೂರ್ತಿಯಾಗಿ ರಚಿತವಾಗದ ಚಿತ್ರದಿಂದಾಗಲೀ, ಶಿಲ್ಪಾಕೃತಿಗಳಿಂದಾಗಲೀ, ಕಟ್ಟಡಗಳಿಂದಾಗಲೀ ಸಂಪೂರ್ಣ ಸೌಂದರ್ಯವು ಉಂಟಾಗಲಾರದು. ಇವುಗಳು ಅಂತಿಮ ರೂಪವನ್ನು ಪಡೆದ ನಂತರವೇ ಅವುಗಳಲ್ಲಿಯ ಸೌಂದರ್ಯವನ್ನು ಸವಿಯಲು ಸಾಧ್ಯವಾಗುತ್ತದೆ. ಅದರಂತೆಯೇ ಗದ್ಯ–ಪದ್ಯ ಸಾಹಿತ್ಯವೂ ಕೂಡ ಅಕ್ಷರಸ್ಥನಾದವನಿಗೆ ವೇದ್ಯವಾಗುವಂತಹ ಕಲೆಯಾಗಿದೆ. ಆದರೆ ಸಂಗೀತವು ಜನ ಸಾಮಾನ್ಯರಿಗೂ ಆತ್ಮಾನಂದವನ್ನು ನೀಡುವ ಕಲೆಯಾಗಿದೆ. ದೈನಂದಿನ ಬದುಕಿನಲ್ಲಿಯೇ ಹಾಸು ಹೊಕ್ಕಾಗಿದೆ. ಈ ದೃಷ್ಟಿಯಿಂದ ಸಂಗೀತ ಕಲೆಯ ಶ್ರೇಷ್ಠತೆಯನ್ನು ಕಾಣಬಹುದಾಗಿದೆ. ಇನ್ನೊಂದು ವೈಶಿಷ್ಟ್ಯವೆಂದರೆ ಸಂಗೀತ ಕಲೆಯು ಮನುಷ್ಯನ ಆತ್ಮೋನ್ನತಿಗೆ ಒಂದು ಸಾಧನವಾಗಿದೆ. ಪುರಾಣಗಳಲ್ಲಿ ಕಂಡುಬರುವಂತೆ ಅನೇಕ ದೇವಾನುದೇವತೆಗಳು ಸಂಗೀತ ವಾದ್ಯಗಳೊಂದಿಗಿರುವುದನ್ನು ಗಮನಿಸಿದಾಗ ದೇವರಿಗೂ ಇದು ಅತ್ಯಂತ ಪ್ರಿಯವಾದ ಕಲೆಯೆಂಬುದು ಮನದಟ್ಟಾಗುತ್ತದೆ. ಆಧುನಿಕ ಜಗತ್ತಿನ ಯಾಂತ್ರಿಕ ಬದುಕಿಗೆ ಶಾಂತಿ, ನೆಮ್ಮದಿ ನೀಡಲು ಸಂಗೀತವೇ ಸಾಧನವಾಗಿದೆಯೆಂದು ಈಗಾಗಲೇ ಸಿದ್ಧವಾಗಿದೆ. ಭಾರತೀಯ ಸಂಗೀತದಲ್ಲಿ ಪಾಶ್ಚಾತ್ಯ ದೇಶಗಳು ವಿಶೇಷ ಆಸಕ್ತಿಯನ್ನು ಹೊಂದಿವೆ. ಇದಕ್ಕೆ ಕಾರಣ ನಮ್ಮ ಸಂಗೀತದಲ್ಲಿರುವ ಅಂತಃ ಸತ್ವ ಹಾಗೂ ಆಧ್ಯಾತ್ಮಿಕ ಮೌಲ್ಯಗಳಾಗಿವೆ. ಮಾನವನ ಅನೇಕ ರೋಗಗಳು ಅದರಲ್ಲೂ ಮನೋರೋಗಗಳಿಗೆ ಸಂಗೀತ ಚಿಕಿತ್ಸೆ ಅತ್ಯಂತ ಪರಿಣಾಮಕಾರಿಯಾದುದು. ಸಂಗೀತದಿಂದ ಗಿಡಗಳು, ವಿವಿಧ ಬೆಳೆಗಳು ಶೀಘ್ರವಾಗಿ ಹಾಗೂ ಚೆನ್ನಾಗಿ ಬೆಳೆಯುವ ಹಾಗೂ ಅಧಿಕ ಇಳುವರಿಯನ್ನು ನೀಡುವದಲ್ಲದೇ ಸತತವಾಗಿ ಸಂಗೀತ ವಾತಾವರಣದಲ್ಲಿರುವ ಪ್ರಾಣಿಗಳು ಸಾಧು ಸ್ವಭಾವವನ್ನು ಹೊಂದುವ ಮತ್ತು ಹಸುಗಳು ಅಧಿಕ ಹಾಲನ್ನು ನೀಡುತ್ತವೆ ಎನ್ನುವಂತಹ ವಿಚಾರಗಳು ವೈಜ್ಞಾನಿಕವಾಗಿ ಸಿದ್ಧಗೊಂಡಿವೆ.

ಹೀಗೆ ಸಂಗೀತ ಕಲೆಯು ಜೀವ ಜಗತ್ತಿಗೆ ಆನಂದ, ನೆಮ್ಮದಿ, ಸಂಸ್ಕಾರ ಹಾಗೂ ದೈಹಿಕ–ಬೌದ್ಧಿಕ ಬೆಳವಣಿಗೆಯನ್ನು ಹೊಂದಲು ಅಮೂಲ್ಯವಾದಂತಹ ಒಂದು ಕಲೆ ಎಂದು ವೇದ್ಯವಾಗುವುದರ ಮೂಲಕ ಉಳಿದೆಲ್ಲ ಕಲೆಗಳಿಗಿಂತ ಶ್ರೇಷ್ಠ ಕಲೆಯಾಗಿ ನಿಂತಿದೆ.

# ಅಧ್ಯಾಯ–3

**ಪಾರಿಭಾಷಿಕ ಶಬ್ಧಗಳ ವಿವರಣೆ:**

**ಸಂಗೀತ :** ಗೀತ ವಾದ್ಯ, ನೃತ್ಯ ಈ ಮೂರು ಕಲೆಗಳ ಸಮಾವೇಶವು ಸಂಗೀತ ಎನಿಸಿಕೊಳ್ಳುತ್ತದೆ.

**ಧ್ವನಿ :** ವಸ್ತು ಸಂಘರ್ಷದಿಂದ ಉಂಟಾಗುವ ಶಬ್ಧಕ್ಕೆ ಧ್ವನಿ ಎನ್ನುತ್ತಾರೆ. ಸಂಗೀತದಲ್ಲಿ ಧ್ವನಿ ಎಂಬುದು ಅಭಿವ್ಯಕ್ತಿ ಮಾಧ್ಯಮವಾಗಿರುತ್ತದೆ.

**ನಾದ :** ಗದ್ದಲವಲ್ಲದ ಕೇಳಲು ಇಂಪಾದ ಸಂಗೀತೋಪಯೋಗಿ ಧ್ವನಿ ನಾದ ಎನಿಸಿಕೊಳ್ಳುತ್ತದೆ. ಕಂಪನದ ಆಂದೋಲನವು ನಿಯಮಿತವಿರುವದರಿಂದ ಇದು ಗದ್ದಲೆನ್ನಿಸುವುದಿಲ್ಲ. ನಾದದಲ್ಲಿ ಅನಾಹತ ಮತ್ತು ಆಹತ ನಾದಗಳೆಂದು ಎರಡು ಪ್ರಕಾರಗಳಿವೆ.

1. ಪ್ರತ್ಯಕ್ಷ ಶ್ರವಣ ಮಾಡಲು ಸಾಧ್ಯವಾಗುವ ನಾದಕ್ಕೆ ಆಹತನಾದ ಎನ್ನುತ್ತಾರೆ.
2. ಕೇವಲ ಯೋಗಿಗಳಿಂದ ಆತ್ಮ ಜ್ಞಾನದ ಮೂಲಕ ತಿಳಿಯಲ್ಪಡುವ ನಾದಕ್ಕೆ ಅನಾಹತನಾದ ಎನ್ನುತ್ತಾರೆ.

**ಶೃತಿ :** ಸಂಗೀತದಲ್ಲಿ ಪ್ರಯೋಗಿಸಲ್ಪಡುವ ಮತ್ತು ಪರಸ್ಪರ ಪ್ರತ್ಯೇಕ ಹಾಗೂ ಸ್ಪಷ್ಟವಾಗಿ ಗುರುತಿಸಲ್ಪಡತಕ್ಕಂತ ನಾದಕ್ಕೆ ಶೃತಿ ಎನ್ನುತ್ತಾರೆ. ಪ್ರಾಚೀನ ಸಂಗೀತಜ್ಞರು 22 ಶೃತಿಗಳನ್ನು ನಿರ್ದಿಷ್ಟಗೊಳಿಸಿದ್ದಾರೆ.

**ಸ್ವರ :** ರಂಜನೀಯುವಾದ ಮತ್ತು ಶೃತಿಯುನ್ನು ಅವಲಂಬಿಸಿದ ಸಂಗೀತೋಪಯೋಗಿ ಮಧುರ ಧ್ವನಿ ಸ್ವರ ಎನಿಸಿಕೊಳ್ಳುತ್ತದೆ.

ಪ್ರಚಲಿತ ಹಿಂದೂಸ್ತಾನಿ ಸಂಗೀತದಲ್ಲಿ 12 ಸ್ವರಗಳು ಬಳಸಲ್ಪಡುತ್ತದೆ.

**ಶುದ್ಧಸ್ವರ :** ಗಾಯನ ವಾದನದ ಅಭ್ಯಾಸ ಸಮಯದಲ್ಲಿ ಸ್ವರಗಳನ್ನು ಯಾವ ಅಂತರದಲ್ಲಿ ಕಲಿಸಲಾಗುತ್ತದೆಯೋ ಆ ಸ್ವರಗಳಿಗೆ ಶುದ್ಧಸ್ವರಗಳು ಎನ್ನುತ್ತಾರೆ. ಮಧ್ಯ ಸಪ್ತಕದ ಶುದ್ಧ ಸ್ವರಗಳಿಗೆ ಯಾವುದೇ ಚಿಹ್ನೆ ಇರುವದಿಲ್ಲ.

**ವಿಕೃತ ಸ್ವರ** : ಶುದ್ಧ ಸ್ವರದ ಕೆಳಗಿನ ಅಥವಾ ಮೇಲಿನ ಸ್ವರಗಳನನ್ನು ವಿಕೃತಸ್ವರಗಳು ಎನ್ನುತ್ತಾರೆ.

**ಕೋಮಲ ಸ್ವರ** : ಶುದ್ಧ ಸ್ವರದ ಕೆಳಗಿನ ಸ್ವರ ಕೋಮಲ ಸ್ವರ ಎನಿಸಿಕೊಳ್ಳುತ್ತದೆ.ಕೋಮಲ ಸ್ವರಗಳನ್ನು ಕೆಳಗಡೆ ಅಡ್ಡ ಗೆರೆ ರೆ ಹೀಗೆ ಸೂಚಿಸುತ್ತಾರೆ.

**ತೀವ್ರ ಸ್ವರ** : ಶುದ್ಧ ಸ್ವರದ ಮೇಲಿನ ಸ್ವರ ತೀವ್ರ ಸ್ವರವಾಗಿರುತ್ತದೆ.ತೀವ್ರ ಸ್ವರವನ್ನು ಮೇಲ್ಗಡೆ ಉದ್ದಗೆರೆ(ಮ)ಹೀಗೆ ಸೂಚಿಸುತ್ತಾರೆ.

**ಆರೋಹ** : ಸಂಗೀತದಲ್ಲಿ ಸ್ವರಗಳನನ್ನು ಏರಿಕೆಯ ಕ್ರಮದಲ್ಲಿ ಪ್ರಸ್ತುತ ಪಡಿಸುವ ಕ್ರಮಕ್ಕೆ ಆರೋಹ ಎನ್ನುತ್ತಾರೆ.

**ಅವರೋಹ** : ಸ್ವರಗಳನನ್ನು ಇಳಿಕೆಯ ಕ್ರಮದಲ್ಲಿ ಪ್ರಸ್ತುತ ಪಡಿಸುವ ಕ್ರಮಕ್ಕೆ ಅವರೋಹ ಎನ್ನುತ್ತಾರೆ.

**ಪಕ್ಕಡ** : ಆಯಾ ರಾಗದ ಛಾಯೆಯನ್ನು ಅಥವಾ ಚಿತ್ರಣವನ್ನು ಹೆಚ್ಚು ಸ್ಪಷ್ಟವಾಗಿ ಪ್ರಕಟಿಸುವ ಸ್ವರ ಪ್ರಸ್ತಾರಕ್ಕೆ ಪಕ್ಕಡ ಎನ್ನುತ್ತಾರೆ.

**ಸಪ್ತಕ** : ಶೃತಿಯೊಂದರ 7 ಶುದ್ಧ ಸ್ವರಗಳ ಕ್ರಮಬದ್ಧ ಉಪಸ್ಥಿತಿಗೆ ಸಪ್ತಕ ಎನ್ನುತ್ತಾರೆ. ಮಂದ್ರ ಮಧ್ಯ ಮತ್ತು ತಾರ ಸಪ್ತಕಗಳೆಂದು 3 ಪ್ರಕಾರಗಳಿವೆ.

**ಮಧ್ಯ ಸಪ್ತಕ** :ಸಾಮಾನ್ಯ ಧ್ವನಿಮಟ್ಟದ ಸ್ವರಗಳುಳ್ಳ ಸಪ್ತಕವು ಮಧ್ಯ ಸಪ್ತಕ ಎನ್ನಿಸಿಕೊಳ್ಳುತ್ತದೆ.

**ಮಂದ್ರ ಸಪ್ತಕ** : ಮಧ್ಯ ಸಪ್ತಕದ ಸ್ವರಗಳಿಗಿಂತ ಎರಡುಪಟ್ಟು ಕಡಿಮೆ ಧ್ವನಿಮಟ್ಟದ ಅಥವಾ ಕೆಳಮಟ್ಟದ ಧ್ವನಿಪ್ರಮಾಣದ ಸ್ವರಗಳುಳ್ಳ ಸಪ್ತಕವು ಮಂದ್ರ ಸಪ್ತಕ ಎನ್ನಿಸಿಕೊಳ್ಳುತ್ತದೆ. ಇದನ್ನು ಸ್ವರದ ಕೆಳಗಡೆ (ಫ)ಹೀಗೆ ಸೂಚಿಸುತ್ತಾರೆ.

**ತಾರ ಸಪ್ತಕ**: ಮಧ್ಯ ಸಪ್ತಕದ ಸ್ವರಗಳಿಗಿಂತ ಎರಡುಪಟ್ಟು ಎತ್ತರದ ಧ್ವನಿಪ್ರಮಾಣದ ಸ್ವರಗಳುಳ್ಳ ಸಪ್ತಕವು ತಾರ ಸಪ್ತಕವಾಗಿದೆ.

ಇದನ್ನು ಸ್ವರದ ಮೇಲ್ಗಡೆ (ಪ)ಹೀಗೆ ಸೂಚಿಸುತ್ತಾರೆ.

**ರಾಗ :** ಸ್ವರ ಮತ್ತು ವರ್ಣಗಳ ಮೂಲಕ ಸೌಂದರ್ಯ ಭರಿತವಾದ, ಶ್ರೋತೃವಿನ ಮನಸ್ಸನ್ನು ರಂಜಿಸಿ ಮುದಗೊಳಿಸುವ ಸ್ವರರಚನೆಗೆ ರಾಗ ಎನ್ನುತ್ತಾರೆ.ಥಾಟ್ ಅಥವಾ ಮೇಳವನ್ನು ಉದ್ಭವ ಸ್ಥಾನವಾಗಿ ಹೊಂದಿರುವ ರಾಗವು ಜಾತಿ,ಸ್ವರ ಪ್ರಸ್ತು ತಿ ನಿಯಮ ಮುಂತಾದ ನಿಯಮಗಳಿಗೆ ಒಳಪಟ್ಟಿರುತ್ತದೆ.

**ತಾಲ :** ಸಂಗೀತದಲ್ಲಿ ಕಾಲವನ್ನು ಅಳೆಯುವ ಮಾಪನಕ್ಕೆ ತಾಲ ಎನ್ನುತ್ತಾರೆ.ಗಾಯನ ವಾದನದಲ್ಲಿ ರಂಜಕತೆ ಮತ್ತು ಮಾಧುರ್ಯ ತರುವ ನಿಶ್ಚಿತ ಕಾಲ ಪ್ರಮಾಣವು ತಾಲಎನ್ನಿಸಿಕೊಳ್ಳುತ್ತದೆ ತಾಲವುರೇಕಾ, ಪೆಟ್ಟು, ಹುಸಿ, ಭಾಗ, ಜಾತಿ, ಮಾತ್ರೆಗಳು, ಸಮ್, ವರ್ಣ(ಬೋಲ್) ಇತ್ಯಾದಿಗಳನ್ನು ಹೊಂದಿರುತ್ತದೆ.

**ಲಯ :** ತಾಲದ ಗತಿ ವೇಗವನ್ನು ಲಯ ಎನ್ನುತ್ತಾರೆ.ಮಾತ್ರೆಗಳ ನಡುವಿನ ಸಮಾನ ಅಂತರವು ಲಯ ಎನ್ನಿಸಿಕೊಳ್ಳುತ್ತದೆ.

ವಿಲಂಬಿತ, ಮಧ್ಯ ಮತ್ತು ದೃತ್ ಎಂದು ಮೂರು ಲಯದ ಪ್ರಕಾರಗಳಿವೆ.

**ಮಾತ್ರೆ :** ಸಂಗೀತದಲ್ಲಿ ತಾಲವನ್ನು ಅಳೆಯುವ ಏಕಮಾನಕ್ಕೆ ಮಾತ್ರೆ ಎನ್ನುತ್ತಾರೆ.

**ಸಮ್ :** ತಾಲದ ಪ್ರಾರಂಭಿಕ ಮಾತ್ರೆಯನ್ನು ಸಮ್ ಎಂದು ಕರೆಯುತ್ತಾರೆ. ಸಮ್‌ನ್ನು x ನಿಂದ ಸೂಚಿಸುತ್ತಾರೆ.

**ಆವರ್ತನ :** ತಾಲದ ಸಮ್ ನಿಂದ ಸಮ್ ವರೆಗಿನ ಅಂತರವನ್ನು ಪ್ರಕಟಿಸುವ ಆವೃತ್ತಿಗೆ ಆವರ್ತನ ಎನ್ನುತ್ತಾರೆ.

**ತಾಲಿ(ಪೆಟ್ಟು) :** ತಾಲವನ್ನು ಕೈಯಲ್ಲಿ ಹಾಕಿ ತೋರಿಸುವಾಗ ನಡೆಸುವ ಸಶಬ್ದ ಕ್ರಿಯೆಗೆ ತಾಲಿ(ಪೆಟ್ಟು) ಎನ್ನುತ್ತಾರೆ.ಪೆಟ್ಟುಗಳನ್ನು ಸಂಖ್ಯೆಗಳಿಂದ ಸೂಚಿಸುತ್ತಾರೆ.

**ಖಾಲಿ(ಹುಸಿ) :** ತಾಲವನ್ನು ಕೈಯಲ್ಲಿ ಹಾಕಿ ತೋರಿಸುವಾಗ ನಡೆಸುವ ನಿಶಬ್ದ ಕ್ರಿಯೆಗೆ ಖಾಲಿ(ಹುಸಿ) ಎನ್ನುತ್ತಾರೆ.ಹುಸಿಯನ್ನು 0 ದಿಂದ ಸೂಚಿಸುತ್ತಾರೆ

**ಠೇಕಾ :** ತಾಲಕ್ಕೆ ಸಂಬಂಧಿಸಿದ ಎಲ್ಲ ಅಂಶಗಳ ಆಧಾರದೊಂದಿಗೆ ನಿರ್ಧರಿಸಲ್ಪಟ್ಟ ಅಕ್ಷರಗಳ ಸಮೂಹಕ್ಕೆ ಠೇಕಾ ಎನ್ನುತ್ತಾರೆ.

**ದುಗುನ್ :** ರಚನೆಯೊಂದರ ಸಾಧಾರಣಲಯದ ಎರಡು ಪಟ್ಟು ವೇಗ ಅಂದರೆ 1 ಮಾತ್ರೆ ಸಮಯದಲ್ಲಿ 2 ಮಾತ್ರೆಗಳ ಪ್ರಸ್ತುತಿಗೆ ದುಗುನ್,3 ಮಾತ್ರೆಯ ಪ್ರಸ್ತುತಿಗೆ ತಿಗುನ್,4 ಮಾತ್ರೆಯ ಪ್ರಸ್ತುತಿಗೆ ಚೌಗುನ್ __ ಎನ್ನುತ್ತಾರೆ.

**ಕಾಯದಾ :** ತಾಲದ ಭಾಗಗಳಿಗೆ ಅನುಗುಣವಾಗಿ ಸುಂದರ ಬೋಲ್ ಗಳ ಸಮೂಹವನ್ನು ಪಲ್ಟಾಗಳ ಮೂಲಕ ವಿಸ್ತರಿಸಲ್ಪಡುವ ರಚನೆಯನ್ನು ಕಾಯದಾ ಎನ್ನುತ್ತಾರೆ.

# ಅಧ್ಯಾಯ–4

## ಹಿಂದುಸ್ತಾನಿ ಮತ್ತು ಕರ್ನಾಟಕಿ ಸಂಗೀತ ಪದ್ಧತಿಗಳ ತುಲನಾತ್ಮಕ ಅಧ್ಯಯನ

**ಹಿಂದುಸ್ತಾನಿ:**–ದಕ್ಷಿಣದ ಕೆಲವು ರಾಜ್ಯಗಳನ್ನು ಬಿಟ್ಟು ಸಮಸ್ತ ಭಾರತದಲ್ಲಿ ಪ್ರಚಾರದಲ್ಲಿರುವ ಈ ಪದ್ಧತಿಯು ಪ್ರಾಚೀನ ಭಾರತೀಯ ಸಂಗೀತ ಧಾರೆಯೊಡನೆ ಮಧ್ಯ ಏಷ್ಯಾ, ಪರ್ಷಿಯಾ ಮುಂತಾದ ದೇಶಗಳ ಸಂಗೀತ ಪದ್ಧತಿಗಳ ಮಿಶ್ರಣದೊಂದಿಗೆ ಬೆಳೆದುಬರುತ್ತಿದೆ.ವೇದಕಾಲದ ಸಾಮಗಾಯನ, ಜಾತಿಗಾಯನ,ಪ್ರಬಂಧ ಗಾಯನ,ಸ್ವರಗ್ರಾಮ ಪದ್ಧತಿ, ರಾಗಗಾಯನ, ಧ್ರುಪದ್–ಧಮಾರ್, ಖ್ಯಾಲ್, ಠುಮ್ರಿ, ಲಘು ಸಂಗೀತ ಈ ರೀತಿ ಕಾಲ ಕಾಲದಲ್ಲಿ ಅಂದಿನ ಸಾಮಾಜಿಕ ಜೀವನಶೈಲಿ, ಅನ್ಯದೇಶೀಯ ಆಡಳಿತ, ಭಾಷೆ, ಸಂಸ್ಕೃತಿಗಳ ಪ್ರಭಾವದಿಂದ ಹಂತ ಹಂತವಾಗಿ ಬದಲಾಗುತ್ತಾ ಹಿಂದೆ ಹೇಳಿದ ಅನೇಕರೂಪಗಳಲ್ಲಿ ಪ್ರಸ್ತುತಗೊಳುತ್ತಾ ಬಂದ ಈ ಶೈಲಿಯಲ್ಲಿ ಸ್ವರಕ್ಕೆ ಪ್ರಾಧಾನ್ಯತೆ ಹೆಚ್ಚು. ತಾನಪುರಾ, ವಯೋಲಿನ್, ಹಾರ್ಮೋನಿಯಂ, ತಬಲಾ, ಸಾರಂಗಿ, ಬಾನ್ಸುರಿ, ಸಿತಾರ್ ಮುಂತಾದ ವಾದ್ಯಗಳು ಬಳಕೆಯಲ್ಲಿವೆ.ಈ ವಾದ್ಯಗಳಲ್ಲೂ ಕೂಡ ಸ್ವರೂಪಾಂತರ ಪ್ರಕ್ರಿಯೆ ನಡೆದಿದೆ.ಉದಾ;ವೀಣೆಯ ಆಧಾರದಿಂದ ಸಿತಾರ್,ಮೃದಂಗದ ಆಧಾರದಿಂದ ತಬಲಾ ವಾದ್ಯಗಳ ನಿರ್ಮಾಣವಾಗಿದೆ.ಈ ಶೈಲಿಯ ಹಾಗೂ ವಾದ್ಯಗಳ ಪ್ರವರ್ತಕ ಅಮೀರ್ ಖುಸ್ರೊ ಎಂಬ ಉಲ್ಲೇಖವಿದೆ.

ಭರತ, ಸಾರಂಗದೇವರಂಥ ಶಾಸ್ತ್ರಕಾರರ ಗ್ರಂಥಗಳು ಮೂಲ ಶಾಸ್ತ್ರಾಧಾರಗಳಾಗಿ ಪರಿಗಣಿಸಲ್ಪಡುತ್ತವೆ.ವರ್ತಮಾನದಲ್ಲಿ ಪಂ.ಬಾತಖಂಡೇ ಹಾಗೂ ಪಂ.ಪಲುಸ್ಕರ್ ರವರ ಸಂಶೋಧನೆ,ಪ್ರಯತ್ನಗಳು, ಹೊಸ ಸ್ವರ–ತಾಲ ಲಿಪಿ ಪದ್ಧತಿಯ ಬಳಕೆ ಇವು ಈ ಶೈಲಿಯನ್ನು ಶ್ರೀಮಂತಗೊಳಿಸಿವೆ.ಇಲ್ಲಿ ಗಾಯನದಷ್ಟೇ ವಾದ್ಯ ಸಂಗೀತಕ್ಕೂ ಮಹತ್ತ್ವವಿದೆ. ವಯೋಲಿನ್, ಸಾರಂಗಿ, ತಬಲಾ ಇವು ಸ್ವತಂತ್ರ ಹಾಗೂ ಸಹವಾದ್ಯ ಹೀಗೆ ಎರಡೂ ಪಾತ್ರ ನಿರ್ವಹಿಸುತ್ತವೆ.ಧ್ರುಪದ್ ಶೈಲಿಯ ನಂತರ ಖ್ಯಾಲ್ ಎಂಬ ಹೆಸರಿನಲ್ಲಿ ಪ್ರಚಾರಗೊಳ್ಳುತ್ತಿರುವ ಈ ಶೈಲಿಯಲ್ಲಿ ಆಂತರಿಕವಾಗಿ ಅನೇಕ ಬದಲಾವಣೆಗಳು ನಡೆಯುತ್ತಲೇ ಇವೆಯಾದರೂ ಒಂದು ಹಂತದಲ್ಲಿ ಶಾಸ್ತ್ರಾನುಸರಣೆ ನಡೆದೇ ಇದೆ. ಆಲಾಪ,ಲಯ ವೈವಿಧ್ಯಮಯ ತಾನ್–ಬೋಲ್ ತಾನ್, ಚಿಕ್ಕ ಸಾಹಿತ್ಯವುಳ್ಳ ಬಂದಿಶ್– ತರಾನಾಗಳ ಮೂಲಕ ವಿಲಂಬಿತ್, ಮಧ್ಯ, ದೃತ್ ಲಯಗಳಲ್ಲಿ